# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\583\2017\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:11/01/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ವೆಂಕಟಸ್ವಾಮಿ ಬಿನ್ ಲೇ.ರಾಮಪ್ಪ, #292, ಗಲ್‌ಪೇಟೆ, 7ನೇ ವಾರ್ಡ್ ಗಂಗಮ್ಮನ ಗುಡಿ ಹಿಂಬಾಗ, ಕೋಲಾರ ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಕೋಲಾರ ಜಿಲ್ಲೆ ಗಂಗಮ್ಮನ ಗುಡಿ ಹಿಂಭಾಗ 7ನೇ ವಾರ್ಡ್ ಗಲ್‌ಪೇಟೆ #292ರ ನಿವಾಸಿಯಾದ ಶ್ರೀ.ವೆಂಕಟಸ್ವಾಮಿ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಸಹಾಯಕ ಆಯುಕ್ತರು, ಕೋಲಾರ ಉಪವಿಭಾಗ, ಕೋಲಾರ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಕೋಲಾರ ತಾಲ್ಲೂಕ್ ಹುತ್ತೂರು ಹೋಬಳಿ ಕೋಟಿಗಾನಹಳ್ಳಿ ಗ್ರಾಮದ ಸರ್ವೆ ನಂ.82ರಲ್ಲಿ 6 ಎಕರೆ 13 ಗುಂಟೆ ಪೈಕಿ 0.38 ಗುಂಟೆಯನ್ನು ಎಂಆರ್ ನಂ.2/2001-02ರಂತೆ ದೂರುದಾರರ ಹೆಸರಿಗೆ ಮಾಡಲು ಐಹೆಚ್‌ಆರ್ 83/97-98ರಲ್ಲಿ ಉಪ ತಹಶೀಲ್ದಾರ್‌ರವರು ಆದೇಶ ಮಾಡಿದ್ದರೂ ಎದುರುದಾರರು ತಿದ್ದುಪಡಿ ಮಾಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆ/ ವರದಿಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆ/ ವರದಿಯಲ್ಲಿ-

ದಿನಾಂಕ:22/12/16ರ ಹಿಂಬರಹದೊಂದಿಗೆ ಸಲ್ಲಿಸಿದ ಆಕ್ಷೇಪಣೆ/ ವರದಿಯಲ್ಲಿ, ಪ್ರಸ್ತಾಪಿತ ವಿಚಾರದ ಬಗ್ಗೆ ಕೈಗೊಂಡ ಕ್ರಮ ಬಗ್ಗೆ ದೂರುದಾರರಿಗೆ ಈಗಾಗಲೇ ಹಿಂಬರಹವನ್ನು ನೀಡಿದ್ದು, ಸರ್ವೆ

ನಂ.82ರಲ್ಲಿ ಪಹಣಿ ಕಾಲಂ 3 ಮತ್ತು 9ಕ್ಕೆ ವಿಸ್ತೀರ್ಣ ತಾಳೇ ಇರುವುದರಿಂದ, ಯಾವ ಖಾತೆದಾರರ ವಿಸ್ತೀರ್ಣವನ್ನು ಕಡಿತಗೊಳಿಸಬೇಕೋ ಅಂಥಹ ಖಾತೆದಾರರನ್ನು ಪ್ರತಿವಾದಿಗಳನ್ನಾಗಿ ಮಾಡಿ, ಸಕ್ಷಮ ಪ್ರಾಧಿಕಾರದಲ್ಲಿ ದೂರುದಾರರು ಮೇಲ್ಮನವಿಯನ್ನು ಸಲ್ಲಿಸಿಕೊಂಡು ಸೂಕ್ತ ಪರಿಹಾರವನ್ನು ಪಡೆಯಬಹುದಾಗಿದೆಯೆಂದು ಹೇಳಿದ್ದಾರೆ.

4. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಕೋಲಾರ ತಾಲ್ಲೂಕ್ ಹುತ್ತೂರು ಹೋಬಳಿ ಕೋಟಿಗಾನಹಳ್ಳಿ ಗ್ರಾಮದ ಸರ್ವೆ ನಂ.82ರಲ್ಲಿ 6 ಎಕರೆ 13 ಗುಂಟೆ ಪೈಕಿ 0.38 ಗುಂಟೆ ಜಮೀನು ಐಹೆಚ್ಆರ್ ಸಿಆರ್ 83/97–98ರಂತೆ ಆದೇಶವಾಗಿದ್ದು, ಅವರ ಹೆಸರಿಗೆ ಮ್ಯುಟೇಷನ್ ವಹಿ ದಾಖಲಾಗದೇ ಇರುವುದು ಕಂಡು ಬಂದಿದೆ. ಈ ಬಗ್ಗೆ ದೂರುದಾರರು ಕಂದಾಯ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದು, ಕೋಲಾರ ತಾಲ್ಲೂಕ್ ತಹಶೀಲ್ದಾರ್‌ರು ಎದುರುದಾರರಿಗೆ ಕಳುಹಿಸಿ ಕೊಟ್ಟಿದ್ದಾರೆ. ಸದರಿ ಪ್ರಕರಣದಲ್ಲಿ ಎದುರುದಾರರು, ಆರ್‌ಟಿಸಿ ಕಾಲಂ 3ರಲ್ಲಿ 6 ಎಕರೆ 13 ಗುಂಟೆ ಇದ್ದು, ಆರ್‌ಟಿಸಿ ಕಾಲಂ 9ರಲ್ಲಿ 9 ಎಕರೆ 19 ಗುಂಟೆ ಇದ್ದು, ಕಾಲಂ 3 ಮತ್ತು 9ಕ್ಕೆ ವಿಸ್ತೀರ್ಣ ತಾಳೆ ಇಲ್ಲದ ಕಾರಣ ಹೆಚ್ಚುವರಿಯಾಗಿ 3–15 ಎಕರೆ ವಿಸ್ತೀರ್ಣವನ್ನು ಕಡಿತಗೊಳಿಸುವ ಸಲುವಾಗಿ ಶ್ರೀ.ಶೀನಪ್ಪ ಬಿನ್ ಲೇ.ಗದ್ದೆಪ್ಪ, ಶ್ರೀ.ಶಂಕರಪ್ಪ ಬಿನ್ ಲೇ.ರಾಜಗೋಪಾಲ ಮತ್ತು ಶ್ರೀ.ಕೆ.ವಿ.ನಾರಾಯಣಪ್ಪ ರವರುಗಳಿಗೆ ನೋಟೀಸನ್ನು ನೀಡಿದ್ದು, ಅವರ ಪೈಕಿ ಶ್ರೀ.ಶೀನಪ್ಪ ಮತ್ತು ಶ್ರೀ.ಕೆ.ವಿ.ನಾರಾಯಣಪ್ಪ ರವರು ಮೃತಪಟ್ಟಿದ್ದಾರೆಂದು ಹೇಳಿದ್ದು, ಶ್ರೀ.ಶಂಕರಪ್ಪ ಬಿನ್ ಲೇ.ರಾಜಗೋಪಾಲ ರವರು ನೋಟೀಸ್ ಪಡೆಯಲು ನಿರಾಕರಿಸಿದ್ದರಿಂದ, ನೋಟೀಸ್ ಜಾರಿಯಾಗದೇ ಅವರ ವಿಸ್ತೀರ್ಣಗಳನ್ನು ಕಡಿತ ಮಾಡಲು ಅವಕಾಶ ಇಲ್ಲ ಮತ್ತು ಯಾವ ಖಾತೆದಾರರ? ಎಷ್ಟು ವಿಸ್ತೀರ್ಣವನ್ನು ಕಡಿತಗೊಳಿಸಬೇಕೆಂದು? ತಹಶೀಲ್ದಾರ್‌ರವರು ಸ್ಪಷ್ಟಪಡಿಸಿರುವುದಿಲ್ಲವೆಂದು ದಿನಾಂಕ:22/12/16ರಂದು ಹಿಂಬರಹವನ್ನು ಎದುರುದಾರರು ದೂರುದಾರರಿಗೆ ನೀಡಿದ್ದಾರೆ;

2) ದೂರುದಾರರಿಗೆ ಸೇರಿದ ಜಮೀನಿನ ಕಂದಾಯ ದಾಖಲೆಗಳನ್ನು ತಿದ್ದುಪಡಿ ಮಾಡುವ ಅಧಿಕಾರ/ ಕಾರ್ಯ ವ್ಯಾಪ್ತಿ ಎದುರುದಾರರಿಗಿದ್ದು, ಸಂಬಂಧಪಟ್ಟ ಕೆಲವರು ಮೃತಪಟ್ಟಿದ್ದಾರೆ ಹಾಗೂ ಇನ್ನೊಬ್ಬರು ನೋಟೀಸ್ ಪಡೆಯಲು ನಿರಾಕರಿಸಿರುತ್ತಾರೆಂಬ ಕಾರಣಕ್ಕಾಗಿ ಮಾತ್ರ ಎದುರುದಾರರು ತಮಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸದೇ, ದೂರುದಾರರು ಮೇಲ್ಮನವಿಯನ್ನು ಸಲ್ಲಿಸುವುದರ ಮುಖಾಂತರ ಪರಿಹಾರವನ್ನು ಕಂಡು ಕೊಳ್ಳಬಹುದು ಎಂದು ಹೇಳಿರುವುದು ನ್ಯಾಯೋಚಿತವಲ್ಲ. ಎದುರುದಾರರು ಹಿಂಬರಹವನ್ನು ನೀಡಿರುವುದರಿಂದ, ಅವರ ಕರ್ತವ್ಯ ಲೋಪ ಕಂಡು ಬರದಿದ್ದರೂ, ದೂರುದಾರರಿಗೆ ಸೂಕ್ತ ಪರಿಹಾರ ಒದಗಿಸ ಬೇಕಾಗಿದೆ.

5. ಆದ್ದರಿಂದ, ಕೋಲಾರ ತಾಲ್ಲೂಕ್ ಹುತ್ತೂರು ಹೋಬಳಿ ಕೋಟಿಗಾನಹಳ್ಳಿ ಗ್ರಾಮದ ಸರ್ವೆ ನಂ.82ರಲ್ಲಿ ಆರು (6) ಎಕರೆ 13 ಗುಂಟೆ ಪೈಕಿ 0.38 ಗುಂಟೆ ಜಮೀನು ಐಹೆಚ್ಆರ್ ಸಿಆರ್ 83/97–98ರಂತೆ

..ವೇಶವಾಗಿದ್ದು, ದೂರುದಾರರ ಹೆಸರಿಗೆ ಮ್ಯುಟೇಷನ್ ವಹಿ ದಾಖಲಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

6. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 11-1-18.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ–2,**
**ಕರ್ನಾಟಕ ರಾಜ್ಯ.**

11/01